# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ
# UNIVERSITY OF HORTICULTURAL SCIENCES, BAGALKOT

**ದಿನಾಂಕ 22–03–2019 ರಂದು ಬೆಳಿಗ್ಗೆ 11:00 ಗಂಟೆಗೆ ಕೊಠಡಿ ಸಂ. 252, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇಲ್ಲಿ ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 50ನೇ (ತುರ್ತು) ಸಭೆಯ ನಡುವಳಿಗಳು**

---

**MINUTES OF 50th (EMERGENT) MEETING OF THE BOARD OF MANAGEMENT HELD ON 22-03-2019 AT 11.00 AM AT ROOM NO. 252, M. S. BUILDING, BENGALURU**

**ಹಾಜರಾದ ಸದಸ್ಯರು**

**Members present**

| | | | |
|---|---|---|---|
| 1. | **ಡಾ. ಕೆ. ಎಂ. ಇಂದಿರೇಶ**<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ,<br>ತೋವಿವಿ, ಬಾಗಲಕೋಟ. | : | ಅಧ್ಯಕ್ಷರು |
| | **Dr. K. M. Indiresh**<br>Vice-Chancellor and Chairman<br>Board of Management, UHS, Bagalkot. | : | Chairman |
| 2 | **ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ,** ಭಾ.ಆ.ಸೇ.<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಸದಸ್ಯರು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ ತೋಟಗಾರಿಕೆ<br>ಇಲಾಖೆ, ಎಂ. ಎಸ್. ಬಿಲ್ಡಿಂಗ್, ಬೆಂಗಳೂರು–560 001. | : | ಸದಸ್ಯರು |
| | **Sri Rajender Kumar Kataria,** I.A.S.,<br>Principal Secretary GOK and Member,<br>Board of Management, UHS, Bagalkot,<br>Department of Horticulture,<br>M.S. Building, Bengaluru-560001. | : | Member |
| 3 | **ಶ್ರೀಮತಿ ಪದ್ಮಾವತಿ**<br>ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಪ್ರತಿನಿಧಿಗಳು ಮತ್ತು<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು–560 001. | : | ಸದಸ್ಯರು |
| | **Mrs. Padmavathi**<br>Additional Secretary to GOK, Dept. of Finance<br>Representative of Principal Secretary GOK and<br>Member, Board of Management, UHS,<br>Bagalkot, Department of Finance, Vidhana<br>Soudha, Bengaluru-560001. | : | Member |
| 4. | **ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ**<br>ವಿಧಾನ ಪರಿಷತ್ ಸದಸ್ಯರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೂಪಲ್ಲಿ ಗ್ರಾಮ, ಜೆ. ತಿಮ್ಮಸಂದ್ರ ಪೋಸ್ಟ್<br>ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ. | : | ಸದಸ್ಯರು |
| | **Sri R. Chowda Reddy Thoopalli**<br>Member of Legislative Council and Member<br>Board of Management, UHS, Bagalkot<br>Tupalli Village, J. Timmasandra Post<br>Srinivaspur Taluka, Kolar District. | : | Member |

| | | | |
|---|---|---|---|
| 5. | **ಡಾ. ಎಂ. ವಿ. ವೆಂಕಟೇಶ, ಭಾ.ಆ.ಸೇ.,**<br>ತೋಟಗಾರಿಕೆ ನಿರ್ದೇಶಕರು ಮತ್ತು ಸದಸ್ಯರು, ವ್ಯವಸ್ಥಾಪನಾ ಮಂಡಳಿ,<br>ತೋವಿವಿ, ಬಾಗಲಕೋಟ, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್,<br>ಬೆಂಗಳೂರು–560004. | : | ಸದಸ್ಯರು |
| | **Dr. M. V. Venkatesh,** I.A.S.,<br>Director of Horticulture and Member,<br>Board of Management, UHS Bagalkot,Dept. of Horticulture, Lalbagh, Bangalore 560004. | : | Member |
| 6. | **ಡಾ. ಎನ್. ರಾಜೇಶ್ವರಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 36, ಬೇವುಬೆಲ್ಲ, 1ನೇ ಕ್ರಾಸ್, ವಿದ್ಯಾನಗರ,<br>ಶಿವಮೊಗ್ಗ–577203. | : | ಸದಸ್ಯರು |
| | **Dr. N. Rajeshwari**<br>Member, Board of Management, UHS, Bagalkot<br>No. 36, Bevubella, 1st Cross, Vidyanagara,<br>Shivamogga-577203. | : | Member |
| 7. | **ಶ್ರೀ ಶಂಕರಪ್ಪ ಬಸಪ್ಪ ಮಳಲಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮು:ಪೋ: ಉತೂರು, ತಾ: ಮುಧೋಳ, ಜಿ: ಬಾಗಲಕೋಟ | : | ಸದಸ್ಯರು |
| | **Sri. Shankarappa Basappa Malali**<br>Member, Board of Management, UHS, Bagalkot<br>Mu:Po: Utturu, Mudhol Taluka, Dist: Bagalkot | : | Member |
| 8. | **ಶ್ರೀ ಎಸ್. ಎನ್. ಮಂಜುನಾಥಗೌಡ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶೆಟ್ಟಿಮಾದಮಂಗಲ ಗ್ರಾಮ, ವೆಲಗಲಬುರ್ರೆ (ಅಂಚೆ), ವಯಾ ದಳಸನೂರು,<br>ಮದನಹಳ್ಳಿ ಪಂಚಾಯಿತು–563126, ತಾಲ್ಲೂಕು ಮತ್ತು ಜಿಲ್ಲೆ: ಕೋಲಾರ. | : | ಸದಸ್ಯರು |
| | **Sri S. N. Manjunathagowda**<br>S/o. Late Nanjappa<br>Member, Board of Management,<br>UHS, Bagalkot<br>Shettymadamangala Village,<br>Velagalaburre Post, Via Dalasanur,<br>Madanahally Panchayath-563126,<br>Tq & Dist : Kolar | : | Member |
| 9. | **ಶ್ರೀ ಆರ್. ಎಂ. ನಾಗೇಶ್**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ನಂ. 25, ಜುಬಿಲಿ ಶಾಲೆ ಹತ್ತಿರ, ಪಾಪರೆಡ್ಡಿಪಾಳ್ಯ, ನಾಗರಬಾವಿ,<br>ಬೆಂಗಳೂರು–560 072. | : | ಸದಸ್ಯರು |
| | **Sri R. M. Nagesh**<br>Member, Board of Management, UHS, Bagalkot<br>No. 25, Near Jubilee School, Papareddy Palya,<br>Nagarbhavi, Bengaluru-560 072. | : | Member |
| 10. | **ಶ್ರೀ ಯೋಗಿರಾಜ ಬಿ. ಪಾಟೀಲ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 142, “ಸದ್ಗುರು”, 5ನೇ ಕ್ರಾಸ್, ಕುಸುಮನಗರ ಮುಖ್ಯ ರಸ್ತೆ, ವೈದ್ಯ<br>ಮಠ ಸಂಕೀರ್ಣ ಹಿಂದುಗಡೆ, ಧಾರವಾಡ–580008. | : | ಸದಸ್ಯರು |

| | | | |
|---|---|---|---|
| | **Dr. Yogiraj B. Patil**<br>Member, Board of Management, UHS, Bagalkot<br>No. 142, "Sadguru", 5th Cross<br>Kusumnagar Main Road, Backside of Vaidya Math Complex, Dharwad-580008. | : | Member |
| 11. | **ಶ್ರೀಮತಿ ಕಸ್ತೂರಿ ತವನಪ್ಪ ಅಷ್ಟಗಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶಿವನಗರ, ಸವದತ್ತಿ ರಸ್ತೆ, ಮುರುಘಾ ಮಠದ ಹತ್ತಿರ,<br>ಧಾರವಾಡ – 581208. | : | ಸದಸ್ಯರು |
| | **Smt. Kasturi Tavanappa Astagi**<br>Member, Board of Management, UHS,<br>Bagalkot, Shivanagar, Savadatti Road,<br>Near Muruga Math,<br>Dharwad-581208. | : | Member |
| 12. | **ಡಾ. ಕೆ. ಎಮ್. ಇಂದಿರೇಶ**<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ | : | ಸದಸ್ಯರು |
| | **Dr. K. M. Indiresh**<br>Director of Education and Member<br>Board of Management, UHS, Bagalkot | : | Member |
| 13. | **ಡಾ. ವೈ. ಕೆ. ಕೋಟಿಕಲ್**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ | : | ಸದಸ್ಯ ಕಾರ್ಯದರ್ಶಿಗಳು |
| | **Dr. Y. K. Kotikal**<br>Registrar & Member-Secretary,<br>Board of Management,<br>UHS, Bagalkot. | : | Member Secretary |

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು ಇವರು ವ್ಯವಸ್ಥಾಪನ ಮಂಡಳಿಯ 50ನೇ (ತುರ್ತು) ಸಭೆಗೆ ಹಾಜರಾದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ತದನಂತರ, ವ್ಯವಸ್ಥಾಪನ ಮಂಡಳಿಯ ಸದಸ್ಯರು ಶ್ರೀ ಆರ್. ಚೌಡಾ ರೆಡ್ಡಿ ತೂಪಲ್ಲಿ ಇವರು ಸರ್ಕಾರದ ಮುಖ್ಯ ಸಚೇತಕರಾಗಿ ನೇಮಕಗೊಂಡ ಪ್ರಯುಕ್ತ ಇವರಿಗೆ ಮಂಡಳಿಯ ಪರವಾಗಿ ಸನ್ಮಾನಿಸಲಾಯಿತು. ಮುಂದುವರೆದು, ಸದಸ್ಯ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು ಇವರು ಸಭೆಗೆ ಮೊದಲ ಬಾರಿಗೆ ಹಾಜರಾದ ತೋಟಗಾರಿಕೆ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಭಾ.ಆ.ಸೇ. ಮತ್ತು ತೋಟಗಾರಿಕೆ ನಿರ್ದೇಶಕರಾದ ಡಾ. ಎಂ. ವಿ. ವೆಂಕಟೇಶ, ಭಾ.ಆ.ಸೇ. ಇವರುಗಳಿಗೆ ಸಹ ಮಂಡಳಿಯ ಪರವಾಗಿ ಸನ್ಮಾನಿಸಲಾಯಿತು. ಲೋಕಸಭಾ ಚುನಾವಣೆ–2019 ರ ಪ್ರಯುಕ್ತ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಸರ್ಕಾರದ ಪತ್ರ ದಿನಾಂಕ 19–03–2019 ರನ್ವಯ ಅನುಮತಿ ಪಡೆದು ಈ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷರು ಎಲ್ಲ ಸದಸ್ಯರ ಗಮನಕ್ಕೆ ತಂದರು. ಸದಸ್ಯ ಕಾರ್ಯದರ್ಶಿಗಳು ಅಧ್ಯಕ್ಷರು ಇವರಿಗೆ ಸಭೆಯನ್ನು ಕೈಗೊಂಡು ಕಾರ್ಯಸೂಚಿಗಳನ್ವಯ ಚರ್ಚೆಗಳನ್ನು ಕೈಗೊಳ್ಳಲು ವಿನಂತಿಸಿದರು. ಸಭೆಯಲ್ಲಿ ತೋವಿವಿ, ಬಾಗಲಕೋಟದ 2019–20ನೇ ಸಾಲಿನ ಆಯವ್ಯಯ ಅಂದಾಜು ಮತ್ತು ಸರ್ಕಾರದಿಂದ ಬಿಡುಗಡೆಯಾದ ಅನುದಾನ ಮತ್ತು ಖರ್ಚು–ವೆಚ್ಚಗಳನ್ನು ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ದಿನಾಂಕ 22–3–2019 ರ ಬೆಳಗ್ಗೆ ಬಹುಮಹಡಿಗಳ ಕಟ್ಟಡ, ಬೆಂಗಳೂರು ಇಲ್ಲಿ ನಡೆದ 21ನೇ ಹಣಕಾಸು ಸಮಿತಿಯಲ್ಲಿ ಮಂಡಿಸಿದ 2019–20ರ ಆಯವ್ಯಯ ಅಂದಾಜುಗಳನ್ನು ಕೂಲಂಕಷವಾಗಿ ಚರ್ಚಿಸಿ, ಸಮಿತಿಯು 2019–20ರ ಆಯವ್ಯಯವನ್ನು ಶಿಫಾರಸ್ಸು ಮಾಡಿರುವ ಪ್ರಸ್ತಾಪವನ್ನು ಗೌರವಾನ್ವಿತ ಮಂಡಳಿ ಸಭೆಯ ಗಮನಕ್ಕೆ ತರಲಾಯಿತು. ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳ ಮೇಲೆ ಸುದೀರ್ಘ ಚರ್ಚೆಗಳನ್ನು ಕೈಗೆತ್ತಿಕೊಂಡು ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

At the outset, the Registrar and Member Secretary welcomed members of the Board of Management to the 50th (Emergent) meeting. After that, Sri R. Chowda Reddy Thoopalli, Board member has been felicitated in view of his appointment as Government Chief Whip on behalf of Board. Further, Member Secretary and Chairman welcomed the Sri. Rajender Kumar Kataria, IAS, Principal Secretary and Dr. M. V. Venkatesh, Director of Horticulture, Department of Horticulture were also felicitated on behalf of Board as they were attended the meeting for the first time. The Chairman informed the house that, this meeting has been organized with the permission of the Government vide letter dated 19-03-2019 in view of Code of Conduct for Parliament Election-2019. The Member Secretary requested the Chairman to chair the meeting and to conduct the deliberations as per the agenda for discussion. The proposed budget for the year 2019-20 and budget released by the Government and receipts and payments were placed before the meeting and discussed in detail. It was brought to the notice of the Board that the proposed budget for the year 2019-20 was placed before the 21st Meeting of Finance Committee of UHS, Bagalkot held at morning on 22-3-2019 at M.S. Building, Bengaluru, after detailed deliberation, the finance committee recommended the proposed budget for the year 2019-20 for Board of Management for kind approval. After the detailed deliberations and discussions on the agenda subjects, the following decisions were resolved during the Board meeting.

| | |
|---|---|
| **ಕಾರ್ಯಸೂಚಿ ಸಂ.1** | **ದಿನಾಂಕ 22–3–2019 ರಂದು ಜರುಗಿದ ತೋವಿವಿ, ಬಾಗಲಕೋಟದ ಹಣಕಾಸು ಸಮಿತಿಯ 21ನೇ ಸಭೆಯ ನಡಾವಳಿಗಳ ಅನುಮೋದನೆ ಕುರಿತು** |
| | **ಚರ್ಚೆ ಮತ್ತು ಠರಾವು :**<br>ದಿನಾಂಕ 22–3–2019 ರಂದು ಜರುಗಿದ ತೋವಿವಿ, ಬಾಗಲಕೋಟದ ಹಣಕಾಸು ಸಮಿತಿಯ 21ನೇ ಸಭೆಯ ನಡುವಳಿಗಳನ್ನು ಮಂಡಳಿಯು ಸುದೀರ್ಘವಾಗಿ ಚರ್ಚಿಸಿ ಸದರಿ ನಡುವಳಿಗಳಿಗೆ ತನ್ನ ಅನುಮೋದನೆ ನೀಡಿತು. ಮುಂದುವರೆದು, ಮಂಡಳಿಯು ತೋವಿವಿ, ಬಾಗಲಕೋಟದ ಹಣಕಾಸು ಸಮಿತಿಯ 21ನೇ ಸಭೆಯ ನಡುವಳಿಗಳ ಪ್ರಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)** |
| **Item No.1** | **Approval for Proceedings of the 21st Meeting of Finance Committee of UHS, Bagalkot held on 22-3-2019.** |
| | **Discussion & Resolution :**<br>The Board discussed the subject at length and accorded its approval for the proceedings of the 21st meeting of Finance Committee of UHS, Bagalkot held on 22-3-2019. Further, |

| | |
|---|---|
| | Board directed the University to take necessary actions as per the proceedings of the 21st meeting of Finance Committee, UHS, Bagalkot. **(Action: Comptroller)** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇನ್ನಿತರ ವಿಷಯಗಳು** | |
| **Any other items with permission of the Chair** | |
| **1** | ವಿಶ್ವವಿದ್ಯಾಲಯದ ಲೆಕ್ಕ ಪರಿಶೋಧನೆ ಮತ್ತು ವರದಿಯ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು. ತೋವಿವಿ, ಬಾಗಲಕೋಟದ ಲೆಕ್ಕ ಪರಿಶೋಧನೆಯ ಪ್ರಕ್ರಿಯೆಯನ್ನು ಕಡ್ಡಾಯವಾಗಿ ಪ್ರತಿ ವರ್ಷ ಸೆಪ್ಟಂಬರ್ ಮಾಹೆಯೊಳಗಾಗಿ ಅಂತಿಮಗೊಳಿಸಿ, ನಿಯಮಾನುಸಾರ ವ್ಯವಸ್ಥಾಪನ ಮಂಡಳಿಯ ಅನುಮೋದನೆ ಪಡೆದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. ಅಲ್ಲದೇ, ಮಂಡಳಿಯು ವಿಶ್ವವಿದ್ಯಾಲಯದ ಹಣಕಾಸಿನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳ ಪಟ್ಟಿ ತಯಾರಿಸಿ, ಅದರನ್ವಯ ಕ್ರಮಕೈಗೊಳ್ಳಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. **(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು)** |
| **1** | There was a discussion held about University audit and its report in the Board meeting. After detailed deliberations, the Board directed the University to take up the process of audit of UHS, Bagalkot before September of every year compulsorily and to submit the report to the Government after getting the approval of the Board of Management as per the regulations. Further, Board directed the University to prepare the Calendar of Events of University financial activities and to initiate actions as per the Calendar of Events. **(Action: Comptroller)** |
| **2** | ಮಂಡಳಿಯ ಸದಸ್ಯರುಗಳು ವಿಶ್ವವಿದ್ಯಾಲಯದಿಂದ ವಿವಿಧ ಬ್ಯಾಂಕ್‌ಗಳಲ್ಲಿ ಮಾಡಲಾಗಿರುವ ಸ್ಥಿರ ಠೇವಣಿಗಳ ಬಗ್ಗೆ ವಿಚಾರಿಸಿದರು. ಈ ಬಗ್ಗೆ ಸುದೀರ್ಘ ಚರ್ಚೆಯ ನಂತರ, ಇನ್ನುಮುಂದೆ ವಿಶ್ವವಿದ್ಯಾಲಯದಿಂದ ಸ್ಥಿರ ಠೇವಣಿಗಳನ್ನು ಕಡ್ಡಾಯವಾಗಿ ಇ–ಟೆಂಡರ್ ಮೂಲಕವೇ ಬ್ಯಾಂಕ್‌ಗಳಲ್ಲಿ ಇಡಲು ವಿಶ್ವವಿದ್ಯಾಲಯಕ್ಕೆ ಮಂಡಳಿಯು ನಿರ್ದೇಶಿಸಿತು. **(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು)** |

| | |
|---|---|
| **2** | Board members inquired about the fixed deposits of University maintained in various Banks. After detailed deliberations, Board directed the University to make the fixed deposits by the University in Banks through e-tender in future compulsorily.<br>**(Action: Comptroller)** |
| **3** | ತೋವಿವಿ, ಬಾಗಲಕೋಟದಲ್ಲಿ ಖಾಲಿ ಇರುವ “ಸಿ” ಮತ್ತು “ಡಿ” ದರ್ಜೆ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳುವಾಗ ಹೊರಗುತ್ತಿಗೆ ಪದ್ಧತಿಯ ಯೋಜನೆಯ ಬದಲಾಗಿ ಪ್ರಸ್ತುತವಾಗಿ ಜಾರಿಯಲ್ಲಿರುವ ಪದ್ದತಿಯನ್ನು ಮುಂದುವರೆಸಲು ಸುದೀರ್ಘವಾಗಿ ಸಭೆಯಲ್ಲಿ ಚರ್ಚಿಸಲಾಯಿತು. ವಿಶ್ವವಿದ್ಯಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ಮಾನವೀಯತೆಯ ದೃಷ್ಠಿಯಿಂದ ಪ್ರಸ್ತುತವಾಗಿ ಜಾರಿಯಲ್ಲಿರುವ ಪದ್ದತಿಯನ್ನು ಮುಂದುವರೆಸುವಂತೆ ಕೆಲವು ಸದಸ್ಯರುಗಳು ಸಲಹೆ ನೀಡಿದರು ಹಾಗೂ ಈಗಾಗಲೇ ತೋವಿವಿ, ಬಾಗಲಕೋಟದಲ್ಲಿ ಕನಿಷ್ಠ ಮೂಲ ವೇತನದ ರೂ. 10/- ಕಡಿಮೆ ವೇತನದ ದರದ ಮೇಲೆ ಕಾರ್ಯನಿರ್ವಹಿಸುತ್ತಿರುವ “ಸಿ” ಮತ್ತು “ಡಿ” ದರ್ಜೆಯ ನೌಕರರಿಗೆ 6ನೇ ವೇತನ ಆಯೋಗದ ವೇತನ ಶ್ರೇಣಿಯನ್ನು ಅಳವಡಿಸುವ ಬಗ್ಗೆಯೂ ಮಾನ್ಯ ಸದಸ್ಯರುಗಳು ಸಲಹೆ ನೀಡಿದರು. ಆದರೆ ಇದಕ್ಕೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ ಮತ್ತು ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರುಗಳು ವಿಶ್ವವಿದ್ಯಾಲಯದಲ್ಲಿಯ ಗುತ್ತಿಗೆ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಕರ್ನಾಟಕ ಸರ್ಕಾರದಿಂದ ಸ್ಪಷ್ಟ ನಿರ್ದೇಶನಗಳು ಇರುವುದರಿಂದ ಹಾಗೂ ಕನಿಷ್ಠ ಮೂಲ ವೇತನದ ರೂ. 10/- ಕಡಿಮೆ ವೇತನದ ದರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಹೊಸ ವೇತನ ಶ್ರೇಣಿ ನೀಡಲು ಸರ್ಕಾರದ ಆರ್ಥಿಕ ಇಲಾಖೆಯ ನಿಯಮಗಳಲ್ಲಿ ಅವಕಾಶವಿಲ್ಲದಿರುವುದರಿಂದ, ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಖಾಲಿ ಇರುವ ಅವಶ್ಯಕ “ಸಿ” ಮತ್ತು “ಡಿ” ದರ್ಜೆಯ ಹುದ್ದೆಗಳಿಗೆ ಕನಿಷ್ಠ ಮೂಲ ವೇತನದ ರೂ. 10/- ಕಡಿಮೆ ವೇತನದ ದರದ ಮೇಲೆ ಹಾಗೂ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪದ್ಧತಿಯನ್ನು ಕೈಬಿಟ್ಟು ಎಲ್ಲ “ಸಿ” ಮತ್ತು “ಡಿ” ದರ್ಜೆಯ ನೌಕರರನ್ನು ಕಡ್ಡಾಯವಾಗಿ ಹೊರಗುತ್ತಿಗೆ ಆಧಾರದ ಮೇಲೆ ಟೆಂಡರ್ ಮೂಲಕವೇ ಕೆಲಸಕ್ಕೆ ತೆಗೆದುಕೊಳ್ಳಲು ವಿಶ್ವವಿದ್ಯಾಲಯಕ್ಕೆ ಸೂಚಿಸಿದರು.<br>**(ಕ್ರಮ: ಆಸ್ತಿ ಅಧಿಕಾರಿಗಳು/ಆಡಳಿತಾಧಿಕಾರಿಗಳು)** |

| | |
|---|---|
| **3** | The discussion was held in detail about continuation of existing system of engaging the vacant "C" & "D" group posts in the UHS, Bagalkot instead of outsourcing system in the interest of employees working on contractual basis in the University. In the discussion, some of the Board members suggested to continue the existing system in the interest of employees on humanitarian grounds and also there was discussion held for implementation of 6th Pay Commission Pay Scales to the contractual employees who are engaged with basic minus Rs.10/- of pay scale. In response to this, the Principal Secretary to Government, Department of Horticulture and Additional Secretary to Government, Department of Finance informed the University not to engage the required "C" & "D" group employees working on the basis of daily wages and basic minus Rs. 10/- instead to engage them through outsourcing compulsorily, by calling tender, as there are clear directions from the Government of Karnataka and also there is no provision in the regulations of the Finance Department for extending the basic minus Rs.10/- of pay scale to the "C" & "D" employees working against the vacant posts on contractual basis and directed the University to initiate the action.<br>**(Action: Estate Officer/Administrative Officer)** |

ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.
The meeting was concluded with the vote of thanks.

Sd/-

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,**
**ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ**
**Registrar & Member-Secretary**
**Board of Management, UHS, Bagalkot**